# ಬಜಾರಿಗಳ ಹಜಾರದಲ್ಲಿ ಕೋಮಲ ಗುಲಾಬಿ!

## ನವ್ಯಾ ನಾರಾಯಣ್
ಉದಯದ 'ಗೌರಿಪುರದ ಗಯ್ಯಾಳಿಗಳು' ಗುಲಾಬಿ



◆ **ಗಯ್ಯಾಳಿಗಳ ನಡುವೆ ಸುಕೋಮಲೆ ಗುಲಾಬಿ ಹೇಗೆ ಹೊಂದಾಣಿಕೆಯಾಗುತ್ತಾಳೆ?**

ಗಯ್ಯಾಳಿಗಳು ಅಂದ ತಕ್ಷಣ ಗಂಡುಬೀರಿ, ದುಷ್ಟ, ಹೆಂಗಸು ಎನ್ನುವ ಜನಜನಿತ ಅರ್ಥ ಅರಿವಿಗೆ ಬರುತ್ತದೆ. ಗುಲಾಬಿ ತುಂಬ ಮೃದುಸ್ವಭಾವದ ಹುಡುಗಿ. ಆಕೆಯ ತಂದೆ ಅಕಾಲಿಕ ಮರಣ ಹೊಂದಿದ್ದಾರೆ. ತಂದೆಯ ಸಾವಿಗೆ ಕಾರಣ ತಿಳಿಯಲು ಆಕೆ ಗಯ್ಯಾಳಿಗಳ ಗೌರಿಪುರಕ್ಕೆ ಬಂದಿದ್ದಾಳೆ. ಆಕೆಗೆ ಅನೇಕ ಸಮಸ್ಯೆಗಳಿವೆ. ಆ ಊರ ಜನರ ಬಗ್ಗೆಯೂ ತಿಳಿವಳಿಕೆ ಇದೆ. ಅದನ್ನೆಲ್ಲಾ ಎದುರಿಸಲು ತಯಾರಾಗಿಯೇ ಆಕೆ ಬಂದಿದ್ದಾಳೆ. ಗೌರಿಪುರದ ಬಜಾರಿಯರ ನಡುವೆ ಹೇಗೆ ತನ್ನ ಸತ್ಯಶೋಧವನ್ನು ನಡೆಸುತ್ತಾಳೆ ಎನ್ನುವುದೇ ಕಥೆಯ ಹೂರಣ. ತನ್ನ ತಂದೆ ಸಾವಿಗೆ ಅನೇಕರು ಕಾರಣರಾಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಕಾಣುತ್ತದೆ. ಅದನ್ನು ಭೇದಿಸುವ ಹಾಸ್ಯ ಪ್ರಧಾನ ಕಥೆ ಇದು ಎನ್ನುವುದು ವಿಶೇಷ. ಹೊಸ ಸಮಾಜ ಅಪರಿಚಿತರ ನಡುವೆ ತನ್ನ ಉದ್ದೇಶಿತ ಕೆಲಸವನ್ನು ಮಾಡುತ್ತಾಳೆ. ಕಾಮಿಡಿಯ ಭಾವದಲ್ಲಿ ಸಸ್ಪೆನ್ಸ್ ಕಥನ ಕುತೂಹಲ ಇಲ್ಲಿದೆ.

◆ **ನವ್ಯಾ ಪರಿಚಯ ಹೇಳಬಹುದಾ?**

ಗುಲಾಬಿಗೆ ತದ್ವಿರುದ್ಧ ಗುಣ ಇರುವ ಹುಡುಗಿ. ಗುಲಾಬಿಗೆ ಹೋಲಿಸಿದರೆ ದೊಡ್ಡ ಬಜಾರಿ ನವ್ಯಾ. ತುಂಬಾ ಮಾತನಾಡುತ್ತಾಳೆ. ತೆರೆಯಲ್ಲಿ ಗುಲಾಬಿಯನ್ನು ನೋಡಿದ ನಂತರ ನವ್ಯಾಳನ್ನು ನೋಡಿದರೆ ಆ ಪಾತ್ರಮಾಡಿದ ಹುಡುಗಿ ಇವಳೇ ಎಂದರೆ ಜನ ಸುಲಭಕ್ಕೆ ನಂಬಲ್ಲ. ಇತ್ತೀಚೆಗೆ ಶಾಪಿಂಗ್ ಹೋಗಿದ್ದಾಗ. ಧಾರಾವಾಹಿ ನೋಡುವ ಅಂಗಡಿಯವರು ನನ್ನನ್ನು ನೋಡಿ ನಂಬಲೇ ಇಲ್ಲ. ಹಾಗೆನೋಡಿದರೆ ಗಯ್ಯಾಳಿಗಳ ಪಾತ್ರ ನನಗೆ ಕೊಡಬೇಕಿತ್ತು.

ನನ್ನ ಊರು ಮಂಡ್ಯ ಜಿಲ್ಲೆಯ ಮೇಲುಕೋಟೆ. ತಂದೆ ನಾರಾಯಣಗೌಡ ಬೆಂಗಳೂರಿನಲ್ಲಿ ಹೋಟೆಲ್ ಮಾಡಿದ್ದಾರೆ. ನಾವೆಲ್ಲ ಬೆಂಗಳೂರಿನಲ್ಲಿಯೇ ನೆಲೆಸಿದ್ದೇವೆ.

◆ **ನಟನೆಗೆ ಬರಲು ಹೇಗೆ ಸಾಧ್ಯ ಆಯಿತು?**

ಅಭಿನಯ ಕ್ಷೇತ್ರದಲ್ಲಿ ನಮ್ಮ ಕುಟುಂಬದವರು ಯಾರು ಇಲ್ಲ. ಕುಟುಂಬ ಅಷ್ಟೇ ಏಕೆ ನಮ್ಮೂರ ಸುತ್ತಮುತ್ತಲ ಹಳ್ಳಿಯಲ್ಲಿಯೂ ಯಾರು ಇಲ್ಲ. ನಾನು ಬಣ್ಣ ಹಚ್ಚಲು ಪ್ರೇರಣೆ ನೀಡಿದ್ದು ನನ್ನ ಅಕ್ಕ. ಅವರ ಕನಸನ್ನು ನೆರವೇರಿಸುವ ನಿಟ್ಟಿನಲ್ಲಿ ನಡೆಯುತ್ತಿದ್ದೇನೆ. ಆರಂಭದಲ್ಲಿ ನಟನೆ ಅಂದರೆ ಏನು ಅನ್ನುವುದೂ ಗೊತ್ತಿರಲಿಲ್ಲ. ನಮ್ಮ ತಂದೆ ತಾಯಿ ಕೂಡ ವಿರೋಧಿಸಿದ್ದರು. ನಾನು ನಟನೆಯನ್ನು ಮಾಡಲೇ ಬೇಕು ಒತ್ತಾಸೆಯಾಗಿ ನಿಂತವರು ಅಕ್ಕ. ಇದುವರೆಗೆ ಮೂರು ಪಾತ್ರ ಮಾಡಿದ್ದೇನೆ. ಅವೆಲ್ಲ ನನಗೆ ಹೊಂದಿಕೆಯಾಗುವ ಪಾತ್ರಗಳೇ ಆಗಿದ್ದವು. ನನ್ನ ಮೊದಲ ಧಾರಾವಾಹಿ ಸ್ಟಾರ್ ಸುವರ್ಣದ 'ಸತ್ಯಂ ಶಿವಂ ಸುಂದರಂ'ನಲ್ಲಿ ಪಕ್ಕಾ ಮಂಡ್ಯ ಹುಡುಗಿಯ ಪಾತ್ರವನ್ನೇ ನಿರ್ವಹಿಸಿದ್ದೆ. ಮನೆ ಕೆಲಸದವಳ ಪಾತ್ರ ಮಾಡಿದ್ದ ನಾನು ಮನೆಯ ಯಜಮಾನಿ ಹತ್ತಿರವೇ ಕೆಲಸ ಮಾಡಿಸುವ ಚಾಲಕಿ ಗುಣದ ಹುಡುಗಿ ಪಾತ್ರ. ಹೀಗಿದ್ದಾಗ ಸೌಮ್ಯ ಸ್ವಭಾವದ ಗುಲಾಬಿ ಪಾತ್ರ ಸ್ವಲ್ಪ ಕಷ್ಟ ಅನ್ನಿಸಿತು. ಇಲ್ಲಿ ದಿನವೂ ಕಲಿಯುತ್ತಾ ಸಾಗಬೇಕು.

ಮೊದಲ ಮೂರು ಪಾತ್ರದಲ್ಲಿ ಬಜಾರಿ ಆಗಿದ್ದ ನನಗೆ ಮೃದು ಸ್ವಭಾವದ ಹೊಸ ಪಾತ್ರವನ್ನು ಮಾಡುವುದು ಸವಾಲಾಗಿತ್ತು. ಹೇಗೆ ಈ ಪಾತ್ರವನ್ನು ಮಾಡುವುದು ಎಂದು ಯೋಚಿಸುತ್ತಿದ್ದೆ. ಸಾಮಾಜಿಕ ಮಾಧ್ಯಮದಲ್ಲಿ ಒಳ್ಳೆಯ ಪ್ರತಿಕ್ರಿಯೆ ಬರುತ್ತಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಕ್ರಿಯಾಶೀಲ ಆಗಿದ್ದೇನೆ. ಅಲ್ಲಿ ಪಾಸಿಟಿವ್ ನೆಗೆಟಿವ್ ಪ್ರತಿಕ್ರಿಯೆ ಬರುತ್ತವೆ. ಎಲ್ಲ ಒಂದೇ ರೀತಿ ತೆಗೆದುಕೊಳ್ಳುತ್ತೇನೆ. ತುಂಬ ತಲೆ ತಿನ್ನುವ ಗಿರಾಕಿ ಎಂದು ಅನ್ನಿಸಿದರೆ ಸೂಕ್ಷ್ಮವಾಗಿ ಅಲ್ಲಿಗೆ ನಿಲ್ಲಿಸುತ್ತೇನೆ. ಮುಂದೆ ಸಿನಿಮಾದಲ್ಲಿ ಅವಕಾಶ ಸಿಕ್ಕರೆ ಮಾಡಬೇಕು. ನಾನಾಗಿಯೇ ಯಾವ ಅವಕಾಶವನ್ನೂ ಕಳೆದುಕೊಳ್ಳಲು ಬಯಸುವುದಿಲ್ಲ.

◆ **ಬಣ್ಣ ಹಚ್ಚಿದ ಆರಂಭದ ದಿನಗಳು ಹೇಗಿದ್ದವು?**

ನನ್ನ ಚಹರೆಯೇ ಭಿನ್ನ. ಒಂದೊಂದು ಕಾಸ್ಟ್ಯೂಮ್ಸ್‌ನಲ್ಲಿಯೂ ಭಿನ್ನ ಕಾಣಿಸುತ್ತೇನೆ. ವೇಷವನ್ನು ತೆಗೆದರೆ ಗುರುತಿಸುವುದು ಸುಲಭ ಆಗಲ್ಲ. ಅಂತೆಯೇ ನನ್ನ ಫೋಟೊಗಳ ನೋಟದಲ್ಲಿಯೂ ಭೌತಿಕ ನೋಟದಲ್ಲಿಯೂ ಭಿನ್ನತೆ ಇದೆ ಎಂದು ಅನೇಕರು ಹೇಳುತ್ತಾರೆ. ಇದು ಆರಂಭದ ದಿನಗಳಲ್ಲಿ ನನಗೆ ತುಂಬ ಅಡ್ಡಿಯಾಗುತ್ತಿತ್ತು. ಆಡಿಷನ್ ಮೊದಲ ಹಂತದಲ್ಲಿಯೇ ಹೊರ ಬಂದಿರುತ್ತಿದ್ದೆ. ಎಷ್ಟು ಪ್ರಯತ್ನ ಮಾಡಿದರೂ ಆಗುತ್ತಿಲ್ಲ. ಆದರೆ ನಾನು ಎಂತಹ ಪಾತ್ರವನ್ನಾದರೂ ಮಾಡಲು ಹೊಂದಿಕೆಯಾಗುವಂತೆ ಇದ್ದೇನೆ. ಆದರೂ ರಿಜೆಕ್ಟ್ ಆಗುವುದು ತುಂಬ ಬೇಜಾರಾಗುತ್ತಿತ್ತು. ಮೊದಲ ಧಾರಾವಾಹಿಯಲ್ಲಿ ನಿರ್ದೇಶಕ ದಿಲೀಪ್ ನನ್ನ ಮೇಲೆ ವಿಶ್ವಾಸ ಇಟ್ಟು ಅಂಜಲಿ ಪಾತ್ರ ನೀಡಿದ್ದರು. ಆ ಪಾತ್ರದ ಯಶಸ್ಸು ಅವರಿಗೆ ಸಿಗಬೇಕು. ಒಂದು ಹಂತದಲ್ಲಿ ನನ್ನನ್ನು ಬದಲಿಸಬೇಕು ಎನ್ನುವ ವಿಷಯ ಬಂದಾಗಲೂ ಅವರು ಚಾನೆಲ್‌ಗೆ ಭರವಸೆ ನೀಡಿ ನನ್ನಿಂದಲೇ ಆ ಪಾತ್ರ ಮಾಡಿಸಿದರು.

◆ **ಹೋಟೆಲ್ ಇದೆ, ಬೇಕಾಗಿದ್ದೂ ತಿನ್ನುತ್ತಿರೋ ಏನಾದರೂ ನಿರ್ಬಂಧ ಇದೆಯಾ?**

ನನಗೆ ಫುಲ್ ಮೀಲ್ಸ್ ಇದ್ದರಷ್ಟೇ ಊಟ ಅಂತ ಅನ್ನಿಸುವುದು. ಡಯಟ್ ಹೇಗೆ ಮಾಡುತ್ತಾರೆ ಎನ್ನುವುದೇ ಗೊತ್ತಿಲ್ಲ. ನಿತ್ಯವೂ ಅನ್ನ ತಿಂದೇ ತಿನ್ನುತ್ತೇನೆ. ಹೊಟ್ಟೆ ತುಂಬ ಉಣ್ಣದಿದ್ದರೆ ನಿದ್ದೆ ಬರಲ್ಲ. ನಮ್ಮ ಹಳ್ಳಿಯ ಊಟ ತಿಂದರೇ ತೃಪ್ತಿ. ಡಯಟ್ ತಿನಿಸು ನನಗೆ ಆಗಿಬರಲ್ಲ. ಚಿಕನ್ –ಮಟನ್ ಕೂಡ ಚೆನ್ನಾಗಿಯೇ ಸೇವಿಸುತ್ತೇನೆ. ವರ್ಕೌಟ್ ಅಂತಾನೂ ಏನೂ ಮಾಡುವುದಿಲ್ಲ. ಸಹಜವಾಗಿ ಬದುಕುತ್ತಿದ್ದೇನೆ.

■ **ರಾಘವೇಂದ್ರ ಕೆ.**